ಅ) ಘಟಪ್ರಭಾ ಎಡದಂಡೆ ಕಾಲುವೆ ಲೈನಿಂಗ್ ಆದ ಮೇಲೆ ನೀರಾವರಿ ಆಗುವ ಕ್ಷೇತ್ರ ೧,೬೧,೮೭೧ ಹೆಕ್ಟೇರುಗಳು.

ಇ) ೧) ೧೯೮೪-೮೫ರ ದರಗಳ ಪಟ್ಟಿಗಳ ಅನುಗುಣವಾಗಿ ಕಾಲುವೆಗೆ ಲೈನಿಂಗ್ ಮಾಡಲು ಪರಿಷ್ಕೃತ ಅಂದಾಜು ವೆಚ್ಚ ೩೫.೭೮ ಕೋಟಿ ರೂಪಾಯಿಗಳು.

೨) ಈಗಾಗಲೇ ಆಗಿರುವ ವೆಚ್ಚ ೧೦.೩೧ ಕೋಟಿ ರೂಪಾಯಿಗಳು.

ಈ) ೧೯೮೫-೮೬ನೇ ಸಾಲಿಗೆ ೨೫೫ ಐ.ಎನ್.ಇ.ಡಿ. ಪಂಪ್ಸು ಎಫ್.ಸಿ. ಇದರ ಅಡಿಯಲ್ಲಿ ಕಾಲುವೆ ಮತ್ತು ಉಪ ಕಾಲುವೆಗೆ ವೆಚ್ಚವಾದ ಹಣ ಜನವರಿ ೮೬ರವರೆಗೆ ೧೦೧.೮೨ ಲಕ್ಷ ರೂಪಾಯಿಗಳು.

ಪುತ್ತೂರಿನಲ್ಲಿ ಅಂಗನವಾಡಿಗಳನ್ನು ತೆರೆಯುವ ಬಗ್ಗೆ

೧೧೭೨ ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪುತ್ತೂರು ತಾಲ್ಲೂಕು ಹಿಂದುಳಿದ ಪ್ರದೇಶ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಜಿಲ್ಲೆಯಲ್ಲಿ ಅಂಗನವಾಡಿಗಳನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಪುತ್ತೂರು ತಾಲ್ಲೂಕಿನಲ್ಲಿ ಪ್ರಾರಂಭಿಸದೆ ಇರುವುದಕ್ಕೆ ಕಾರಣವೇನು ?

ಇ) ಕಳೆದ ಬಾರಿ ಸದನದಲ್ಲಿ ಈ ಪ್ರಶ್ನೆಯನ್ನು ಕೇಳಲಾಗಿದ್ದು ೧೯೮೬ನೇ ಸಾಲಿಗೆ ಪುತ್ತೂರು ತಾಲ್ಲೂಕಿನಲ್ಲಿ ಪ್ರಾರಂಭಿಸುವ ನಿಟ್ಟಿನಲ್ಲಿ ಭರವಸೆಯನ್ನು ಕೊಟ್ಟಿದ್ದು ಅದು ಇವರೆಗೂ ಈಡೇರದೆ ಇರಲು ಕಾರಣವೇನು? ಈ ೧೯೮೬ ರಲ್ಲಿ ಅದನ್ನು ಪ್ರಾರಂಭಿಸಲಾಗುವುದೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಹೌದು.

ಆ) ಸಮಗ್ರ ಬಾಲವಿಕಾಸ ಯೋಜನೆಯು ಪುತ್ತೂರು ತಾಲ್ಲೂಕಿಗೆ ಮಂಜೂರಾಗದೆ ಇರುವುದರಿಂದ ಅಂಗನವಾಡಿಗಳನ್ನು ಪ್ರಾರಂಭಿಸಲು ಆಗಲಿಲ್ಲ. ಸಮಗ್ರ ಬಾಲವಿಕಾಸ ಯೋಜನಾ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಮಂಜೂರು ಮಾಡಲಾಗುತ್ತಿದೆ. ಮೀಸಲು ಕ್ಷೇತ್ರ ಮತ್ತು ಬರ ಪೀಡಿತ ಪ್ರದೇಶಗಳಿಗೆ ಆದ್ಯತೆ ಕೊಡಲಾಗುತ್ತಿದೆ.

ಇ) ೨೫೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ತಾಲ್ಲೂಕಿಗೆ ವಿಸ್ತರಿಸಲು ಯೋಜಿಸಲಾಗಿದೆ.

ಭದ್ರಾ ಮೇಲ್ದಂಡೆ ಯೋಜನೆಯಿಂದ ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಿಗೆ ನೀರಾವರಿ

೧೧೪೫ (ಬಿ) ಶ್ರೀ ಆರ್. ರಾಮಯ್ಯ (ಹಿರಿಯೂರು).— ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭದ್ರಾ ಮೇಲ್ದಂಡೆ ಯೋಜನೆಯನ್ನು ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳ ಜನತೆ ಕಾರ್ಯಗತ ಮಾಡಲು ಆಗ್ರಹ ಪಡಿಸಿರುವರೆ ?

ಆ) ಹಾಗಿದ್ದಲ್ಲಿ ಈ ಯೋಜನೆ ಎರಡು ಜಿಲ್ಲೆಗಳ ಯಾವ ಯಾವ ತಾಲ್ಲೂಕುಗಳಲ್ಲಿ ಹರಿಯುವುದು ಮತ್ತು ನಿರೂಪಿಸುವ ಒಟ್ಟು ವಿಸ್ತೀರ್ಣವೆಷ್ಟು ?

ಇ) ಇದರ ಸಮಗ್ರ ಯೋಜನೆ ಗಾತ್ರವನ್ನು ನೀರಾವರಿ ಸಮಿತಿಯಿಂದ ಸಿದ್ಧಪಡಿಸಲಾಗಿದೆಯೇ?

ಈ) ಪ್ರಸ್ತುತ ವರ್ಷದಿಂದಲೇ ಇದರ ಕಾರ್ಯಾಚರಣೆ ಪ್ರಾರಂಭವಾಗುವುದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು